ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 05.10.2023.

**ಮುಂದುವರೆದ ಪಾಟೀ ಸವಾಲುಃ** 7 ಮತ್ತು 10 ನೇ ಪ್ರತಿವಾದಿ ಪರ ಶ್ರೀ ಪಿ.ವಿ.ಎ. ವಕೀಲರಿಂದಃ

ನನ್ನ ತಂದೆ ಮೌಲಾಸಾಬ ರವರು ಕಲಬುರಗಿಯಲ್ಲಿ ವಾಸಿಸುತ್ತಿದ್ದರು. ನನ್ನ ತಂದೆ ಕಲಬುರಗಿಯ 1 ನೇ ಪ್ರತಿವಾದಿ ಮನೆಯಲ್ಲಿ ತಿರಿಕೊಂಡಿರುತ್ತಾರೆ. 1 ನೇ ಪ್ರತಿವಾದಿ ಮನೆ ಕಲಬುರಗಿಯ ಎಂಎಸ್‌ಕೆ ಮಿಲ್, ಗಾಲಿಪ್ ಕಾಲೋನಿ ಹತ್ತಿರ ಇರುತ್ತದೆ. ಅದು ನನ್ನ ಅಣ್ಣನಾದ ಅಮೀರ್ ಅಲಿಯ ಸ್ವಂತ ಮನೆ ಇರುತ್ತದೆ. ನನ್ನ ತಂದೆ ಮರಣದ ವಿಷಯವನ್ನು

ನಾವು ದಾಖಲು ಮಾಡಿಲ್ಲಾ, ಅದು ಅಂದರೆ ನನ್ನ ತಂದೆಯ ಮರಣ ಪ್ರಮಾಣ ಪತ್ರ ನನ್ನ ಅಣ್ಣನ ಹತ್ತಿರ ಇರಬಹುದು. ನನ್ನ ಅಣ್ಣ ಇರುವ ಮನೆ ನಂ.11-1041/125/ಎಸ್ ಗ್ರಿನ್ ಸರ್ಕಲ್ ಎಂಎಸ್‌ಕೆ ಮಿಲ್, ಕಲಬುರಗಿ ಎಂದರೆ ಸರಿ.

ಸದರಿ ಮನೆಯನ್ನು ನನ್ನ ಅಣ್ಣ ಅಮಿರ್ ಅಲಿ ಯಾರಿಂದ ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲಾ. ನನ್ನ ತಾಯಿ ಮೌಲಂಬೀ ರವರು 1 ನೇ ಪ್ರತಿವಾದಿ ಹಾಗೂ ನನ್ನ ಅಣ್ಣ ಅಮೀರ್ ಅಲಿ ಹತ್ತಿರ ಇದ್ದಾಗ ಮರಣ ಹೊಂದಿರುತ್ತಾರೆ. ಮೇಲೆ ಹೇಳಿದ ಕಲಬುರಗಿಯಲ್ಲಿರುವ ಮನೆಯನ್ನು ಹೊರತುಪಡಿಸಿ ಬೇರೆ ಯಾವು ನನ್ನ ತಂದೆಗೆ ಮನೆ ಇರಲಿಲ್ಲ ಎಂದರೆ ಸರಿ. ಚಾಂದಬೀ ಅಂದರೆ 6 ಮತ್ತು 7 ನೇ ಪ್ರತಿವಾದಿಯರ ತಾಯಿ ಎಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಚಾಂದಬೀ ರವರು ವೈಜಾಪುರ ಗ್ರಾಮದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ಚಾಂದಬೀ ಜೀವಂತ ಇರುತ್ತಾರೆ ಎಂದರೆ ಸರಿ. ನನ್ನ ಹಾಗೂ ಸದರಿ ಚಾಂದಬೀ ಮದ್ಯ ಯಾವುದೇ ರೀತಿ ಮಾತುಕತೆ ಇರುವುದಿಲ್ಲ.

6 ಮತ್ತು 7 ನೇ ಪ್ರತಿವಾದಿಯರು ನನ್ನ ಚಿಕ್ಕಮ್ಮನ ಮಕ್ಕಳು ಎಂದು ಹೇಳುತ್ತಾರೆ, ಆದರೆ ನನಗೆ ಏನು ಗೊತ್ತಿರುವುದಿಲ್ಲ. 7 ಮತ್ತು 10 ನೇ ಪ್ರತಿವಾದಿಯರು ಹೇಳುವ ಹಾಗೇ 6 ಮತ್ತು 7 ನೇ ಪ್ರತಿವಾದಿಯರು ಮೌಲಾಸಾಬ ಮತ್ತು ಚಾಂದಬೀ ರವರ ಮಕ್ಕಳು ಇರುತ್ತಾರೆ ಎಂದು ಹೇಳುತ್ತಾರೆ ಎಂದರೆ ಸರಿಯಲ್ಲ. ನಿಪಿ-18 ರಿಂದ 20 ರ ದಾಖಲೆಗಳು ಮೌಲಂಬೀ ಮತ್ತು ಚಾಂದಬೀ ರವರ ಹೆಬ್ಬೆಟ್ಟಿನ ಸಹಿಯನ್ನು ಒಳಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲಾ. ಸದರಿ ನಿಪಿ-18 ರಿಂದ 20 ರ ಕ್ರಯ ಪತ್ರಗಳು 2002 ಮತ್ತು 2013 ರಲ್ಲಿ ಆದ ಕ್ರಯ ಪತ್ರಗಳು ಆಗಿವೆ ಎಂದರೆ ಸರಿ.

ನನ್ನ ತಂದೆ ಮೌಲಾಸಾಬಾ ತನ್ನ ಜೀವಂತ ಕಾಲಕ್ಕೆ 6 ಮತ್ತು 7 ನೇ ಪ್ರತಿವಾದಿಯರ ಹೆಸರಿನಲ್ಲಿ ತನಗೆ ಸೇರಿದ ಸ್ವತ್ತಿಗಳಿಗೆ ಸಂಬಂಧಿಸಿದಂತೆ, ನಿಪಿ-9 ರಂತೆ ಮ್ಯೂಟೇಷನ್ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಜೀವಂತೆ ಕಾಲಕ್ಕೆ 6 ಮತ್ತು 7 ನೇ ಪ್ರತಿವಾದಿಯರ ಹೆಸರಿನಲ್ಲಿ ನಿಪಿ-9 ರಂತೆ ಪಹಣಿಗಳು ಅವರ ಹೆಸರಿನಲ್ಲಿ ಬಂದಿರುತ್ತವೆ ಎಂದರೆ ಸರಿಯಲ್ಲ. 6 ಮತ್ತು 7 ನೇ ಪ್ರತಿವಾದಿಯರು ತಮ್ಮ ಹೆಸರು ಪಹಣಿಗಳಲ್ಲಿ ಬಂದ ನಂತರ ದಾವಾ ಸ್ವತ್ತನ್ನು 10 ನೇ ಪ್ರತಿವಾದಿಗೆ ನಿಪಿ-21 ರಂತೆ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-21 ರಂತೆ 10 ನೇ ಪ್ರತಿವಾದಿ ದಾವಾ ಸ್ವತ್ತುಗಳ ಕಬ್ಜೆಯಲ್ಲಿ ಇದ್ದು, ಉಳಮೆ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ.

ನಿಪಿ-9 ರ ಮ್ಯೂಟೇಷನ್ ಪ್ರಶ್ನಿಸಿ ನಾನಾಗಲಿ, ನನ್ನ ತಂದೆ-ತಾಯಿ ಆಗಲಿ, ಚಾಂದಬೀ ಆಗಲಿ ಎಸಿ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿಲ್ಲಾ ಎಂದರೆ ಸರಿ. 10 ನೇ ಪ್ರತಿವಾದಿ ಹೆಸರಿನಲ್ಲಿ ಮ್ಯೂಟೇಷನ್ ಆದ ನಂತರ ಅದನ್ನು ಕೂಡಾ ಪ್ರಶ್ನಿಸಿ ಎಸಿ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿಲ್ಲಾ ಎಂದರೆ ಸರಿ. ನಾನು ಈ ದಾವೆಯನ್ನು ಎರಡು ಜಮೀನುಗಳಿಗೆ ಮಾತ್ರ ಹಾಕಿರುತ್ತೇನೆ ಎಂದರೆ ಸರಿ. ಐಟಂ ನಂ.1 ರ ಸ್ವತ್ತುನ್ನು 8 ಮತ್ತು 9 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದ್ದು, ಐಟಂ ನಂ.2 ರ ಸ್ವತ್ತನ್ನು 10 ನೇ ಪ್ರತಿವಾದಿಗೆ 6 ಮತ್ತು 7 ನೇ ಪ್ರತಿವಾದಿಯರು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳನ್ನು ಹೊರತುಪಡಿಸಿ ನಮ್ಮ ತಂದೆಗೆ ಯಾವುದೇ ಜಮೀನುಗಳು ಇರಲಿಲ್ಲ. ದಾವಾ ಸ್ವತ್ತುಗಳನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಇನ್ನು ಬೇರೆ ಆಸ್ತಿಗಳು ಇರುತ್ತವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಅಣ್ಣನ ಹೆಂಡತಿ ಇರುತ್ತಾಳೆ. 1 ನೆ

ಪ್ರತಿವಾದಿ ಹೆಸರಿನಲ್ಲಿ ವೈಜಾಪುರ ಗ್ರಾಮದಲ್ಲಿ ಸರ್ವೆ ನಂ. 44/4 ರಲ್ಲಿ 6 ಎಕರೆ ಜಮೀನು ಇರುತ್ತದೆ ಎಂದರೆ ಸರಿ. 6 ಎಕರೆ ಜಮೀನು ಮುಳಗಡೆಯಿಂದ ಬಂದ ಪರಿಹಾರ ಧನವನ್ನು ನಮ್ಮ ತಂದೆ ಎಲ್ಲರಿಗೂ ಹಂಚಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪರಿಹಾರ ಹಣ ಪಡೆದುಕೊಂಡ ನಂತರ ಹೆಚ್ಚಿನ ಪರಿಹಾರ ಧನ ಪಡೆಯುವ ಸಲುವಾಗಿ ನನ್ನ ಚಿಕ್ಕಪ್ಪ ಮೈಬೂಬಸಾಬ, ಅಜ್ಗರ್ ಅಲಿ ಹಾಗೂ ಜಮೀರ್ ಅಲಿ ಮತ್ತು ನನ್ನ ಅಣ್ಣನಾದ ಅಮೀರ್ ಅಲಿ ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬೇರೆ-ಬೇರೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ.

ಸದರಿ ಮೇಲೆ ಹೇಳಿದ ಅರ್ಜಿಗಳಲ್ಲಿ ನನ್ನ ಮತ್ತು 2 ನೇ ವಾದಿಯ ಹೆಸರು ಕೂಡಾ ಇರುತ್ತದೆ. ಮೇಲೆ ಹೇಳಿದ ಅರ್ಜಿಗಳು ಯಾವ ಹಂತದಲ್ಲಿ ಇರುತ್ತವೆ ಎಂದು ನನಗೆ ಗೊತ್ತಿಲ್ಲಾ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮದ್ಯಾಹ್ನ 3.00 ಗಂಟೆಗೆ ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**

ಮದ್ಯಾಹ್ನ 3.00 ಗಂಟೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 05.10.2023.

<u>**ಮುಂದುವರೆದ ಪಾಟೀ ಸವಾಲುಃ** 7 ಮತ್ತು 10 ನೇ ಪ್ರತಿವಾದಿ ಪರ ಶ್ರೀ ಪಿ.ವಿ.ಎ. ವಕೀಲರಿಂದಃ</u>

ನನ್ನ ತಂದೆ ಕಲಬುರಗಿ ನ್ಯಾಯಾಲಯದಲ್ಲಿ ಎಲ್.ಎ.ಸಿ.ನಂ.55/1985 ಹೆಚ್ಚಿನ ಪರಿಹಾರ ಧನ ಪಡೆಯುವ ಸಲುವಾಗಿ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲಾ. ಅದೇ ರೀತಿ ಹೆಚ್ಚಿನ ಪರಿಹಾರ ಧನ ಸಲುವಾಗಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿದ ಅರ್ಜಿ ಕೂಡಾ ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲಾ. 2 ನೇ ವಾದಿ, ನಾನು ಹಾಗೂ 1 ನೇ ಪ್ರತಿವಾದಿ ಮೂರು ಜನ ಕೂಡಿಕೊಂಡು ಇದೆ ನ್ಯಾಯಾಲಯದಲ್ಲಿ ಇ.ಪಿ.ನಂ.53/2022 ಅಂತ ಅಮಲುಬಜಾವಣೆ ಅರ್ಜಿ ಸಲ್ಲಿಸಿದ್ದೇವೆ ಎಂದರೆ ಸರಿ. ಸದರಿ ಇ.ಪಿ. ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಇ.ಪಿ.ಯಲ್ಲಿ ನಾನು ವಕೀಲರನ್ನು ಬೇಟಿಯಾಗಿ ಮಾಹಿತಿ ಕೊಟ್ಟಿರುವುದಿಲ್ಲ. 1 ನೇ ಪ್ರತಿವಾದಿಯನ್ನು ಕುರಿತು ಸದರಿ ಇ.ಪಿ. ಬಗ್ಗೆ ನಾನು ವಿಚಾರಣೆ ಮಾಡಿಲ್ಲಾ.

ಸದರಿ ಇ.ಪಿ.ಯಲ್ಲಿ 6 ಮತ್ತು 7 ನೇ ಪ್ರತಿವಾದಿಯರು ಪಕ್ಷಗಾರರು ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 6 ಮತ್ತು 7 ನೇ ಪ್ರತಿವಾದಿಯರು ನನ್ನ ಚಿಕ್ಕಮ್ಮಳಾದ ಚಾಂದಬೀ ಮತ್ತು ನನ್ನ ತಂದೆ ಮೌಲಾಸಾಬ ರವರ ದಾಂಪತ್ಯ ಜೀವನದಲ್ಲಿ ಹುಟ್ಟಿದ ಮಕ್ಕಳು ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮೌಲಾಸಾಬ ಹಾಗೂ ಬಾಬುಮಿಯಾನ ಎಂಬ ಎರಡು ಹೆಸರಿನಿಂದ ಕರೆಯುತ್ತಿದ್ದರು ಎಂದರೆ ಸರಿಯಲ್ಲ. ಖರೀದಿದಾರರಿಗೆ ಹಾನಿ ಉಂಟುಮಾಡಬೇಕೆಂಬ ದುರು ಉದ್ದೇಶದಿಂದ ನಾನು 2 ನೇ ವಾದಿ ಜೊತೆ ಕೂಡಿ ಹಾಗೂ 1

ರಿಂದ 5 ನೇ ಪ್ರತಿವಾದಿಯರ ಜೊತೆ ಶಾಮಿಲ್ ಆಗಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ರಿಂದ 5 ನೇ ಪ್ರತಿವಾದಿಯರ ಮತ್ತು ನನ್ನ ಮಧ್ಯ ಯಾವುದೇ ವೈರತ್ವ ಇರುವುದಿಲ್ಲ. 1 ರಿಂದ 5 ನೇ ಪ್ರತಿವಾದಿಯರು ಏನು ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 1 ರಿಂದ 5 ನೇ ಪ್ರತಿವಾದಿಯರು ನನಗೆ ಯಾವುದೇ ರೀತಿ ದಾವಾ ಸ್ವತ್ತಿನಲ್ಲಿ ಹಕ್ಕು ಇಲ್ಲಾ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-21 ರ ಪ್ರಕಾರ 10 ನೇ ಪ್ರತಿವಾದಿ ದಾವಾ ಸ್ವತ್ತಿನ ಕಬ್ಜೆ ಮತ್ತು ಮಾಲಿಕನು ಇರುತ್ತಾನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:** 8 ಮತ್ತು 9 ನೇ ಪ್ರತಿವಾದಿಯರ ಪರ ಶ್ರೀ ಎಸ್.ಕೆ.ಬಿ. ವಕೀಲರಿಂದ:

ನಾನು ಶಾಲೆ ಕಲಿತಿಲ್ಲಾ. ನನ್ನ ಮದುವೆಯಾಗಿ 35 ವರ್ಷವಾಗಿರುತ್ತದೆ. ನನ್ನ ತಂದೆ ಮೌಲಾಸಾಬ ರವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿಯಲ್ಲ. ನನ್ನ ತಾಯಿಯ ಹೆಸರು ಮೌಲಾಂಬೀ ಎಂದರೆ ಸರಿ. 2 ನೇ ಹೆಂಡತಿಯ ಹೆಸರು ಚಾಂದಬೀ ಇರುತ್ತದೆ ಎಂದರೆ ಸರಿಯಲ್ಲ. ಚಾಂದಬೀ ಮತ್ತು ಮೌಲಂಬೀ ರವರು ಅಕ್ಕತಂಗಿಯರು ಎಂದರೆ ಸರಿ. ಚಾಂದಬೀ ರವರಿಗೆ 6 ಮತ್ತು 7 ನೇ ಪ್ರತಿವಾದಿಯರು ಮತ್ತು ಮಮತಾಜ ಮಕ್ಕಳು ಇರುತ್ತಾರೆ ಎಂದರೆ ಸರಿ.

ಸರ್ವೆ ನಂ.16 ನ್ನು ನನ್ನ ತಂದೆ 1979 ರಲ್ಲಿ ಮಹಾದೇವಪ್ಪ ರುಕ್ಕಪ್ಪ ಅಮ್ಮನ್ ರವರಿಂದ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮೌಲಾಸಾಬ 2013 ರಲ್ಲಿ ತಿರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ತನ್ನ ಜೀವಂತ ಕಾಲಕ್ಕೆ ಚಾಂದಬೀ ಮತ್ತು ಮೌಲಂಬೀ ಮಕ್ಕಳಾದ 1 ನೇ ಪ್ರತಿವಾದಿ ಗಂಡ ಹಾಗೂ 6 ಮತ್ತು 7 ನೇ

ಪ್ರತಿವಾದಿಯರಿಗೆ ಹಂಚಿಕೊಟ್ಟಿದ್ದಾ ಎಂದರೆ ಸರಿಯಲ್ಲ. ಅದೇ ಪ್ರಕಾರ ಅಮಿರ್ ಅಲಿ ಮತ್ತು 6 ಮತ್ತು 7 ನೇ ಪ್ರತಿವಾದಿ ಹೆಸರು ಮ್ಯೂಟೇಷನ್ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ದಾವೆ ಹಾಕುವ ಕಾಲಕ್ಕೆ 6 ಮತ್ತು 7 ನೇ ಪ್ರತಿವಾದಿ ತಂದೆ ಹೆಸರು ಬಾಬುಮಿಯಾ ಅಂತ ತಪ್ಪು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಯಾರು ಏನು ಎಂದು ನನಗೆ ಗೊತ್ತಿಲ್ಲಾ ಎಂದು ನುಡಿಯುತ್ತಾರೆ. ನಾನು ದಾವೆ ಹಾಕುವ ಕಾಲಕ್ಕೆ 6 ಮತ್ತು 7 ನೇ ಪ್ರತಿವಾದಿ ತಂದೆ ಹೆಸರನ್ನು ಬಾಬುಮಿಯಾ ಎಂದು ಬರೆಸಿಲ್ಲಾ.

ಈ ದಾವೆಯನ್ನು 6 ಮತ್ತು 7 ನೇ ಪ್ರತಿವಾದಿಯರ ಮೇಲೆ ಹಾಕಿರುತ್ತೇನೆ. ನಾನು ದಾವೆ ಹಾಕುವ ಕಾಲಕ್ಕೆ 6 ಮತ್ತು 7 ನೇ ಪ್ರತಿವಾದಿಯರ ಹೆಸರನ್ನು ಹೇಳಿ ಬರೆಸಿಲ್ಲಾ. ಚಾಂದಬೀ ಮಗಳಾದ ಮಮತಾಜ ಬೇಗಂ ಎಲ್ಲಿ ಮದುವೆ ಮಾಡಿಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲಾ. ನಾನು 6 ಮತ್ತು 7 ನೇ ಪ್ರತಿವಾದಿಯರ ಹೆಸರು ಉದ್ದೇಶ ಪೂರ್ವಕವಾಗಿ ಅವರಿಗೆ ಪಾಲು ಕೊಡಬೇಕಾಗುತ್ತದೆ ಎಂಬ ದುರುಉದ್ದೇಶದಿಂದ ತಂದೆಯ ಹೆಸರನ್ನು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. 2 ನೇ ವಾದಿಯ ಮದುವೆಯಾಗಿ 23 ವರ್ಷವಾಗಿರುತ್ತದೆ. ಮದುವೆಯಾದ ನಂತರ ನಾವಿಬ್ಬರು ಗಂಡನ ಮನೆಯಲ್ಲಿ ಇರುತ್ತೇವೆ ಎಂದರೆ ಸರಿ.

ನನ್ನ ತಂದೆ ಜೀವಂತ ಕಾಲಕ್ಕೆ ನಮಗೆ ದಾವಾ ಸ್ವತ್ತುಗಳಲ್ಲಿ ಪಾಲು ಕೇಳಬೇಕೆಂದು ಅನ್ನಿಸಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮೌಲಾಸಾಬ ನಮ್ಮೆಲ್ಲರ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದ ನನ್ನ ಮತ್ತು 2 ನೇ ವಾದಿ ಹಾಗೂ 1 ನೇ ಪ್ರತಿವಾದಿ ಗಂಡನ ಮದುವೆಯನ್ನು ಮಾತ್ರ ಮಾಡಿಕೊಟ್ಟಿರುತ್ತಾರೆ ಎಂದು

ನುಡಿಯುತ್ತಾರೆ. ನನ್ನ ತಂದೆ ಎಲ್ಲರ ಮದುವೆ ಮಾಡಿಕೊಟ್ಟಿದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಂದಬೀ ಇವತ್ತಿಗೂ ಜೀವಂತ ಇದ್ದಾಳೆ ಎಂದರೆ ಸರಿ. ನನ್ನ ತಂದೆ ನಮ್ಮೆಲ್ಲರ ಮದುವೆ ಮಾಡಿಕೊಡಲು ಸಾಲ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ.

ನನ್ನ ತಂದೆ ನನ್ನ ಸಹೋದರ ಅಮೀರ್ ಅಲಿ, 6 ಮತ್ತು 7 ನೇ ಪ್ರತಿವಾದಿಯರು, ಚಾಂದಬೀ, ನನ್ನ ತಾಯಿ ಮೌಲಾಂಬೀ ರವರು ಕೂಡಿಕೊಂಡು ನಿಪಿ-18 ಮತ್ತು 19 ರ ಪ್ರಕಾರ 8 ಮತ್ತು 9 ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಊರಿನವರಾದ ನೀಲಕಂಠ ಕಲ್ಯಾಣ ರಾವ್ ಪಾಟೀಲ್, ನಾಗೇಂದಪ್ಪ, ಶ್ರೀಮಂತ ರೆಡ್ಡಿ, ಸಿದ್ದಣ್ಣ ಪಾಟೀಲ್, ವಸಂತ ತಂದೆ ಪ್ರಭು ರವರು ನಿಪಿ-18 ಮತ್ತು 19 ಆಗುವ ಕಾಲಕ್ಕೆ ಹಾಜರಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತುಗಳಿಗೆ ದರ್ಗಾಕ್ಕೆ ಹೋದಾಗ ಹೋಗಿ ಬಂದು ಮಾಡುತ್ತೇನೆ.

2002 ರಿಂದ 8 ಮತ್ತು 9 ನೇ ಪ್ರತಿವಾದಿಯರು ಇವತ್ತಿಗೂ ದಾವಾ ಸ್ವತ್ತುಗಳ ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. 2002 ರಲ್ಲಿ ಜಮೀನು ಖರೀದಿ ಕಾಲಕ್ಕೆ ಒಣ ಬೇಸಾಯ ಜಮೀನು ಇತ್ತು ಎಂದರೆ ಸರಿ. 8 ಮತ್ತು 9 ನೇ ಪ್ರತಿವಾದಿಯರು ಖರೀದಿ ಪಡೆದುಕೊಂಡ ನಂತರ ಬಾವಿಯಿಂದ ನೀರಾವರಿ ಮಾಡಿಕೊಂಡು ಕಬ್ಬು ಬೆಳೆ ಬೆಳೆದಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮಾರಾಟ ಮಾಡಿಯೇಲ್ಲಾ ಎಂದು ನುಡಿಯುತ್ತಾರೆ. ನಾನು ದಾವೆಯ ವಾದಪತ್ರದಲ್ಲಿ ದಾವಾ ಸ್ವತ್ತುಗಳನ್ನು ಮಾರಾಟ ಮಾಡಿದ ಬಗ್ಗೆ ಬರೆಸಿಲ್ಲಾ ಏಕೆಂದರೆ ನನಗೆ ಅದು ಗೊತ್ತಿರಲಿಲ್ಲ. 2002 ರಿಂದ ನಾನು ದಾವಾ ಸ್ವತ್ತಿಗೆ ಹೋಗಿಲ್ಲಾ,

ಆದರೆ 1 ನೇ ಪ್ರತಿವಾದಿ ಮಕ್ಕಳು ಹೋಗಿ ಬಂದು ಮಾಡುತ್ತಾರೆ.

1 ನೇ ಪ್ರತಿವಾದಿ ಮಕ್ಕಳು ಕೂಡಾ ದಾವಾ ಸ್ವತ್ತಿನ ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮಕ್ಕಳು ದಾವಾ ಸ್ವತ್ತಿನಲ್ಲಿ ಕಬ್ಜೆ ಇರುತ್ತಾರೆ ಎಂದು ತೋರಿಸಲು ನಾನು ದಾಖಲೆ ಹಾಜರುಪಡಿಸಿಲ್ಲಾ. 2002 ರಿಂದ 2021 ರವರೆಗೆ 8 ಮತ್ತು 9 ನೇ ಪ್ರತಿವಾದಿಗಳ ಮೇಲೆ ಕೇಸ್ ಹಾಕಬೇಕೆಂದು ನಮಗೆ ಅನ್ನಿಸಲಿಲ್ಲ. ಸಾಕ್ಷಿ ಮುಂದುವರೆದು 35 ವರ್ಷಗಳಿಂದ ನಾನು ಈ ಕಡೆ ಬಂದಿಲ್ಲಾ ಎಂದು ನುಡಿಯುತ್ತಾರೆ. ನಿಪಿ-20 ರಂತೆ 6 ಮತ್ತು 7 ನೇ ಪ್ರತಿವಾದಿಯರು 10 ನೇ ಪ್ರತಿವಾದಿಗೆ ಸರ್ವೆ ನಂ.44/3 ಹಾಗೂ ಸರ್ವೆ ನಂ.44/6 ರಲ್ಲಿ ಸುಮಾರು 6 ಎಕರೆ ಜಮೀನಿನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-20 ಕ್ಕೂ ಕೂಡಾ ಚಾಂದಬೀ ಮತ್ತು ಆಯಿಶಾಬೇಗಂ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಸರ್ವೆ ನಂ.16 ರಲ್ಲಿ ನಾನು ಎಂದಿಗೂ ಕಬ್ಜೆ ಇಲ್ಲಾ ಎಂದರೆ ಸರಿಯಲ್ಲ. ನಾನು ಸರ್ವೆ ನಂ.16 ರಲ್ಲಿ ಕಬ್ಜೆ ಇರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-18 ಮತ್ತು 19 ರಂತೆ 8 ಮತ್ತು 9 ನೇ ಪ್ರತಿವಾದಿಯರ ಹೆಸರು ದಾವಾ ಸ್ವತ್ತುಗಳ ಪಹಣಿಗಳಲ್ಲಿ ದಾಖಲಾಗಿದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿರುತ್ತವೆ. 6 ಮತ್ತು 7 ನೇ ಪ್ರತಿವಾದಿಯರು ದಾವಾ ಸ್ವತ್ತುನ್ನು ಮಾರಾಟ ಮಾಡಲು ಹಕ್ಕು ಉಳ್ಳವರು ಆಗಿದ್ದರು ಎಂದರೆ ಸರಿಯಲ್ಲ. ನನ್ನ ಮದುವೆಯಾಗಿನಿಂದ ನಾವು ಈ ಕಡೆ ಬಂದಿಲ್ಲಾ ಎಂದರೆ, ಸಾಕ್ಷಿ ಹೆರಿಗೆ ಸಮಯದಲ್ಲಿ ಮತ್ತು ಮದುವೆ ಕಾರ್ಯಕ್ರಮಗಳಲ್ಲಿ ಬಂದು ಹೋಗಿ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ.

ನನ್ನ ತಂದೆ ಮೌಲಾಸಾಬ ಕುಟುಂಬದ ಅಡೆಚಣೆ ಸಲುವಾಗಿ ಹಣಕಾಸಿನ ತೊಂದರೆ ಇತ್ತು ಎಂದರೆ ಸರಿಯಲ್ಲ. ವೈಜಾಪುರ ಗ್ರಾಮದಲ್ಲಿ ನನ್ನ ತಂದೆ ಹೆಸರಿನಲ್ಲಿ ಮನೆ ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳನ್ನು ಮಾರಾಟ ಮಾಡಿದ ನಂತರ ನನ್ನ ತಂದೆ ಕುಟುಂಬದ ಸಮೇತ ಕಲಬುರಗಿಗೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಿಂದೂ ಮುಸ್ಲಿಂ ಗಳಲ್ಲಿ ಜಗಳವಾಗಿ ಕಲಬುರಗಿಗೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಕಲಬುರಗಿಯಲ್ಲಿ ನನ್ನ ತಂದೆ ಹೆಸರಿನಲ್ಲಿ ಮನೆ ಇದೆ ಎಂದರೆ ಸರಿ. ಕಲಬುರಗಿಯಲ್ಲಿರುವ ಮನೆಯ ಮೇಲೆ ಈ ದಾವೆ ಸಲ್ಲಿಸಿಲ್ಲಾ ಎಂದರೆ ಸರಿ. ದಾವಾ ಸ್ವತ್ತುಗಳ ಬೆಲೆ ಹೆಚ್ಚಿಗೆ ಆಗಿದ್ದರಿಂದ, 8 ಮತ್ತು 9 ನೇ ಪ್ರತಿವಾದಿಯರಿಗೆ ಹಾನಿ ಮಾಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆಃ** ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**